ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 39 ಇಎಸ್‌ಟಿ 4 (ಎ) 2016 /3043

ನಿರ್ದೇಶಕರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001
ದಿನಾಂಕ: 06.09.2016

## ಸುತ್ತೋಲೆ

ವಿಷಯ: ಪಿಹೆಚ್.ಡಿ ಪದವಿ ಪಡೆದಿರುವ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಅಧ್ಯಾಪಕರುಗಳಿಗೆ ಮುಂಗಡ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಅಧ್ಯಾಪಕ ವೃಂದದವರಿಗೆ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಲಾದ ಸರ್ಕಾರದ ಆದೇಶ ಸಂಖ್ಯೆ: ಇಡಿ 96 ಡಿಟಿಇ 2010, ದಿನಾಂಕ: 07.03.2011

*-*-*-*-*

ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಅಧ್ಯಾಪಕ ವೃಂದದವರಿಗೆ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಲಾದ ಉಲ್ಲೇಖದ ಸರ್ಕಾರದ ಆದೇಶದ ಅಪೆಂಡಿಕ್ಸ್-3 ರಲ್ಲಿ ಪಿಹೆಚ್.ಡಿ. ಪದವಿಯನ್ನು ಪಡೆದ ಬೋಧಕ ಸಿಬ್ಬಂದಿಗಳಿಗೆ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.

ಅದರಂತೆ ವಿವಿಧ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪಿಹೆಚ್.ಡಿ. ಪದವಿ ಪಡೆದಿರುವ ಬೋಧಕ ಸಿಬ್ಬಂದಿಗಳಿಗೆ ಮುಂಗಡ ವೇತನ ಬಡ್ತಿ ಮಂಜೂರು ಮಾಡಲು ಕೋರಿ ಸಂಸ್ಥೆಯ ಪ್ರಾಂಶುಪಾಲರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದರೆ ಮುಂಗಡ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲು ಈ ಕೆಳಕಂಡ ದೃಢೀಕೃತ ಮಾಹಿತಿ/ದಾಖಲೆಗಳ ಅವಶ್ಯಕತೆ ಇರುತ್ತದೆ.

1. ಸಂಬಂಧಪಟ್ಟ ನೌಕರರ ಸೇವಾಪುಸ್ತಕ
2. ಪಿಹೆಚ್.ಡಿ. ಪದವಿ ಪಡೆಯಲು ಇಲಾಖೆಯಿಂದ ನಿರಾಕ್ಷೇಪಣೆ
3. ಪಿಹೆಚ್.ಡಿ. ಪದವಿಗೆ ನೋಂದಾಯಿಸಿದ ದಾಖಲೆ
4. ಕೋರ್ಸ್ ವರ್ಕ್‌ಗೆ ಸಂಬಂಧಿಸಿದ ದಾಖಲೆ
5. ಸಂಶೋಧನಾ ಪತ್ರವನ್ನು ಪ್ರಕಟಿಸಿದ ಪ್ರತಿ (Copy of research papers published in a referred journal)
6. ಬಾಹ್ಯ ಮೌಲ್ಯಮಾಪನ (External evaluation) ಸಂಬಂಧಿಸಿದ ದಾಖಲೆ
7. VIVA-VOCE Notification ಪ್ರತಿ.
8. ಪಿಹೆಚ್.ಡಿ. ಪ್ರಮಾಣ ಪತ್ರದ ಪ್ರತಿ

ಮೇಲ್ಕಂಡ ಮಾಹಿತಿ/ದಾಖಲೆಗಳನ್ನು ಕೂಡಲೆ ನಿರ್ದೇಶನಾಲಯಕ್ಕೆ ಸಲ್ಲಿಸಲು ಈ ಮೂಲಕ ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿದೆ.

ಜಂಟಿ ನಿರ್ದೇಶಕರು (ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ

ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರು.

ಪ್ರತಿ:

1. ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು
2. ಕಛೇರಿ ಪ್ರತಿ.